# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 36/2014**

**ದೋ.ಸಾ. : 48 ಪ್ರಾ.ಸಾ. : 23**

ಸಾಕ್ಷಿಯ ಹೆಸರು : ಪರಮೇಶ್ವರ ಸದಾನಂದ ಮಾಳ್ಸೇಕರ

ತಂದೆಯ ಹೆಸರು : ಸದಾನಂದ ಮಾಳ್ಸೇಕರ

ವಯಸ್ಸು : 50 ವರ್ಷ

ಕೆಲಸ : ಎ.ಎಸ್.ಐ., ಮಂಕಿ ಪೊಲೀಸ್ ಠಾಣೆ

ವಾಸ : ಮಂಕಿ, ತಾಃ ಹೊನ್ನಾವರ

**ದಿನಾಂಕಃ 18-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಜುಲೈ-2011 ರಿಂದ ಅಗಸ್ಟ್-2018 ರ ವರೆಗೆ ನಾನು ಕದ್ರಾ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೋಲಿಸ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 14-02-2014 ರಂದು ರಾತ್ರಿ 11-30 ಗಂಟೆ ಸುಮಾರಿಗೆ ರಾಜೀವ ನಗರದ ವೇಲು ರವರ ಮನೆಯಲ್ಲಿ ಆತನ ಮಗಳ ಅಶ್ವಿನಿಯ ಕೊಲೆಯಾಗಿದೆ ಹಾಗೂ ವೇಲು ರವರ ಹೆಂಡತಿ ಜಾನಕಿ ಮೇಲೆ ಮಾರಣಾಂತಿಕ ಹಲ್ಲೆಯಾಗಿದೆ ಎಂಬ ಮಾಹಿತಿ ನಮ್ಮ ಠಾಣೆಗೆ ಬಂದಿದ್ದು, ಆ ಕೂಡಲೇ ನಮ್ಮ ಪೊಲೀಸ್ ಸಿಬ್ಬಂದಿಗಳು ಸ್ಥಳಕ್ಕೆ ಹೋಗಿರುತ್ತಾರೆ. ಅದೇ ದಿನ ರಾತ್ರಿ 01-00 ಗಂಟೆ ಸುಮಾರಿಗೆ ವೇಲು ರವರ ಮನೆಯ ಮುಂದೆ ಕೊಡಸಳ್ಳಿ ಕಡೆಗೆ ಹೋಗುವ ಕಾಡಿನ ಕಾಲು ದಾರಿಯಲ್ಲಿ ವೇಲು ಹಾಗೂ ಆತನ ಮಗ ಸತ್ಯ ನಾರಾಯಣ ಮೂರ್ತಿಯ ಕೊಲೆಯಾಗಿದೆ ಎಂಬ ಮಾಹಿತಿಯೂ ಸಹ ಬಂದಿರುತ್ತದೆ. ವೇಲು ಹಾಗೂ ಆತನ ಮಕ್ಕಳ ಕೊಲೆಯಾದ ಮಾಹಿತಿ ಬಂದ ನಂತರ ಅದೇ ದಿನ ರಾತ್ರಿ ಚಾಸಾ-1 ರವರು ನಮ್ಮ ಠಾಣೆಗೆ ಹಾಜರಾಗಿ, ಪಿ.ಎಸ್.ಐ ರವರ ಮುಂದೆ ಹೇಳಿಕೆ ದೂರನ್ನು ನೀಡಿರುತ್ತಾರೆ. ಆ ಸಮಯದಲ್ಲಿ ನಾನು ಠಾಣೆಯಲ್ಲಿ ಹಾಜರಿದ್ದು, ಚಾಸಾ-1 ರವರು ಹೇಳಿದಂತೆ ದೂರನ್ನು ಗಣಕೀಕರಣ ಮಾಡಿರುತ್ತೇನೆ. ಆ ನಂತರ ದೂರು ದಾಖಲಾಗಿರುತ್ತದೆ.

2. ಆ ದಿನ ರಾತ್ರಿ ಸ್ಥಳದಲ್ಲಿ ಶವಗಳನ್ನು ಕಾಯಲು ನಮ್ಮ ಸಿಬ್ಬಂದಿಗಳು ಇದ್ದು, ಮರುದಿನ ಬೆಳಗಿನ ಜಾವ ತನಿಖಾಧಿಕಾರಿಯಾದ ಚಾಸಾ-57 ರವರು ನನಗೆ ವೇಲು ರವರ ಶವವನ್ನು ಕಾಯಲು, ಚಾಸಾ-47 ರವರನ್ನು ಸತ್ಯ ನಾರಾಣಯ ಮೂರ್ತಿಯ ಶವವನ್ನು ಕಾಯಲು ಮತ್ತು ಚಾಸಾ-49 ರವರನ್ನು ಅಶ್ವಿನಿಯ ಶವವನ್ನು ಕಾಯಲು ನಿಯೋಜಿಸಿರುತ್ತಾರೆ. ಅದರಂತೆ ನಾವು ಮೂರೂ ಜನ ಸ್ಥಳಕ್ಕೆ ತೆರಳಿ, ಶವಗಳ ಬೆಂಗಾವಲಿಗೆ ಇರುತ್ತೇವೆ. ನಾವುಗಳು ಶವಗಳ ಬೆಂಗಾವಲಿಗೆ ಇದ್ದಾಗ, ಚಾಸಾ-57 ರವರು ಸ್ಥಳಕ್ಕೆ ಬಂದು, ಸುಮಾರು 10-00 ಗಂಟೆಗೆ ಘಟನಾ ಸ್ಥಳಗಳ ಪಂಚನಾಮೆಯನ್ನು ಮಾಡಿ, ನಂತರ ಶವವಗಳನ್ನು ಆಸ್ಪತ್ರೆಗೆ ತೆಗೆದುಕೊಂಡು ಬರುವಂತೆ ಸೂಚಿಸಿದ ಮೇರೆಗೆ, ನಾವು ಮೂರೂ ಜನರು ಸದರಿ ಮೂರೂ ಶವಗಳನ್ನು ಟಾಟಾ ಏಸ್ ವಾಹನದಲ್ಲಿ ಕಾರವಾರದ ಜಿಲ್ಲಾಸ್ಪತ್ರೆಗೆ ತಂದಿರುತ್ತೇವೆ.

3. ಶವಗಳನ್ನು ಆಸ್ಪತ್ರೆಗೆ ತಂದ ನಂತರ ಅಲ್ಲಿ ತನಿಖಾಧಿಕಾರಿಯಾದ ಚಾಸಾ-57 ರವರು ವೇಲುವಿನ ಶವದ ಶವ ಪಂಚನಾಮೆಯನ್ನು ನಡೆಸಿರುತ್ತಾರೆ ಹಾಗೂ ವೇಲುವಿನ ಶವ ಪರೀಕ್ಷೆ ಮಾಡಲು ವೈದ್ಯಾಧಿಕಾರಿಗಳಿಗೆ ನಮೂನೆ ನಂಃ 146(I) ಮತ್ತು 146(II) ಗಳನ್ನು ನೀಡಿರುತ್ತಾರೆ. ಆ ನಂತರ ಆಸ್ಪತ್ರೆಯ ವೈದ್ಯರು ಶವ ಪರೀಕ್ಷೆಯನ್ನು ನಡೆಸಿ, ವೇಲುವಿನ ಶವ ಹಾಗೂ ಆತನ ಮೈ ಮೇಲೆ ಇದ್ದ ಬಟ್ಟೆಗಳನ್ನು ನನ್ನ ವಶಕ್ಕೆ ನೀಡಿರುತ್ತಾರೆ. ತದನಂತರ ನಾನು ವೇಲುವಿನ ಶವವನ್ನು ಆತನ ತಮ್ಮನಾದ ಚಾಸಾ-30 ಹಾಗೂ ಚಾಸಾ-8 ರವರಿಗೆ ಬಿಟ್ಟುಕೊಟ್ಟಿರುತ್ತೇವೆ ಮತ್ತು ವೇಲುವಿನ ಮೈ ಮೇಲೆ ಇದ್ದ ಬಟ್ಟೆಗಳನ್ನು ತನಿಖಾಧಿಕಾರಿಯಾದ ಚಾಸಾ-57 ರವರ ಮುಂದೆ ಹಾಜರುಪಡಿಸಿದ್ದು, ಅವರು ಸದರಿ ಬಟ್ಟೆಗಳನ್ನು ಪಂಚರ ಸಮಕ್ಷಮ ರಾತ್ರಿ 09-00 ರಿಂದ 09-30 ರವರ ಅವಧಿಯಲ್ಲಿ ಜಪ್ತು ಪಡಿಸಿಕೊಂಡಿರುತ್ತಾರೆ. ಬಟ್ಟೆಗಳನ್ನು ಜಪ್ತು ಪಡಿಸಿಕೊಂಡ ಪಂಚನಾಮೆಯನ್ನು ನಾನು ಬರೆದು, ಸಹಿ ಮಾಡಿ, ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ.

4. ಅದೇ ರೀತಿ ತನಿಖಾಧಿಕಾಗಳು ದಿಃ 15-02-2014 ರಂದು ಸಾಕ್ಷಿದಾರರಾದ ಚಾಸಾ-22 ರಿಂದ 33 ರವರ ಹೇಳಿಕೆಗಳನ್ನು ಪಡೆದುಕೊಳ್ಳುವ ಕಾಲಕ್ಕೆ ಹಾಜರಿದ್ದು, ಸಾಕ್ಷಿದಾರರ ಹೇಳಿಕೆಗಳನ್ನು ಗಣಕೀಕರಣಗೊಳಿಸಿರುತ್ತೇನೆ. ದಿಃ 18-02-2014 ರಂದು ತನಿಖಾಧಿಕಾಗಳು ಸಾಕ್ಷಿದಾರರ ಮರು ಹೇಳಿಕೆಗಳನ್ನು ಪಡೆದುಕೊಂಡು ಅವುಗಳನ್ನು ಸಹ ಗಣಕೀಕರಣಗೊಳಿಸಿರುತ್ತೇನೆ. ಅದೇ ರೀತಿ ತನಿಖಾಧಿಕಾಯವರು ಚಾಸಾ-45 ರಿಂದ 55

ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದು, ಅವುಗಳನ್ನು ಸಹ ಗಣಕೀಕರಣಗೊಳಿಸಿರುತ್ತೇನೆ. ಈ ಪ್ರಕರಣದಲ್ಲಿ ನಾನು ತನಿಖಾ ಸಹಾಯಕನಾಗಿ ಕೆಲಸ ಮಾಡಿದ ಬಗ್ಗೆ ತನಿಖಾಧಿಕಾರಿಗಳ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

5. ಸಾಕ್ಷಿಯು ತಾನು ವೈದ್ಯಾಧಿಕಾರಿಗಳಿಗೆ ನೀಡಿದ ನಮೂನೆ ನಂಃ 146(I) ಮತ್ತು 146(II) ಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾರೆಯಾಗಿ ನಿಪಿ–63 ಎಂದು ಗುರುತಿಸಲಾಯಿತು. ಸಾಕ್ಷಿಯು ವೇಲು ರವರ ಶವವನ್ನು ಚಾಸಾ–8 ಮತ್ತು 30 ರವರಿಗೆ ಬಿಟ್ಟುಕೊಟ್ಟ ಬಗ್ಗೆ ಸ್ವೀಕೃತಿಗಳನ್ನು (ಪಾವತಿಗಳು) ನೋಡಿ ಗುರುತಿಸಿದ್ದು, ಚಾಸಾ–8 ರವರ ಸ್ವೀಕೃತಿಯನ್ನು ಈಗಾಗಲೇ ನಿಪಿ–42 ಎಂದು ಗುರುತಿಸಲಾಗಿರುತ್ತದೆ. ಚಾಸಾ–30 ರವರ ಸ್ವೀಕೃತಿಯನ್ನು ನಿಪಿ–64 ಎಂದು ಗುರುತಿಸಲಾಯಿತು. ಮೃತ ವೇಲು ರವರ ಬಟ್ಟೆ ಜಪ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ–22 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–22(ಬಿ) ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದೆ ಇರುವ ಮೃತ ವೇಲು ರವರ ಬಟ್ಟೆಗಳಾದ ಮುದ್ದೆ ಮಾಲು–19 ಅಂಗಿ, ಮುದ್ದೆ ಮಾಲು–20 ಲುಂಗಿ, ಮುದ್ದೆ ಮಾಲು–21 ನಿಕ್ಕರ್ ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಿಪಿ–6 ಮತ್ತು 14 ಪೋಟೋಗಳಲ್ಲಿ ಮೃತ ವೇಲು ರವರ ಶವವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎ.ಎ ವಕೀಲರಿಂದ**

6. ಮಂಜುನಾಥ ಕುಪ್ಪಸ್ವಾಮಿ ಎನ್ನುವವರು ಅಶ್ವಿನಿಯ ಕೊಲೆಯಾದ ಮಾಹಿತಿಯನ್ನು ನೀಡಿರುತ್ತಾರೆ. ಸದರಿ ಮಾಹಿತಿಯನ್ನು ಠಾಣಾ ಡೈರಿಯಲ್ಲಿ ನಮೂದಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಈ ವಿಷಯವನ್ನು ನಾನು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ದಿಃ 14–02–2014 ರಂದು ರಾತ್ರಿ ಘಟನಾ ಸ್ಥಳಕ್ಕೆ ಶರತ್ ನಾಯ್ಕು, ಕೃಷ್ಣಾ ನಾಯ್ಕು ಮತ್ತು ಚರಣ್ ನಾಯ್ಕು ಎನ್ನುವ ಸಿಬ್ಬಂದಿಗಳು ಹೋಗಿರುತ್ತಾರೆ. ಈ ವಿಷಯವನ್ನೂ ಸಹ ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಸದರಿ ವಿಷಯವನ್ನು ಠಾಣಾ ಡೈರಿಯಲ್ಲಿ ನಮೂದಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಚಾಸಾ–1 ರವರು ಯಾವುದೇ ಸಮಯದಲ್ಲಿಯೂ ನಮ್ಮ ಠಾಣೆಗೆ ಬಂದಿರುವುದಿಲ್ಲ ಹಾಗೂ ಯಾವುದೇ ದೂರನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ತನಿಖಾಧಿಕಾರಿಗಳು ದೂರನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

7. ನಾನು ಹಾಗೂ ಇತರೇ ಸಿಬ್ಬಂದಿಗಳು ಮರು ದಿನ ಬೆಳಿಗ್ಗೆ ಸ್ಥಳಕ್ಕೆ ತೆರಳಿದ ಬಗ್ಗೆ ಠಾಣಾ ಡೈರಿಯಲ್ಲಿ ನಮೂದಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಚಾಸಾ–57 ರವರು ಘಟನಾ ಸ್ಥಳಕ್ಕೆ ಹೋಗು ಎಂದು ಹೇಳಿದ ಮೇರೆಗೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ನಾವು ಶವ ಬಿದ್ದ ಸ್ಥಳಕ್ಕೆ ಬೆಂಗಾವಲಿಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಚಾಸಾ–57 ರವರು ಯಾವುದೇ ಶವ ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನಾವು ಯಾವುದೇ ಕಾಲಕ್ಕೂ ಮೃತ ದೇಹಗಳನ್ನು ಟಾಟಾ ಏಸ್ ವಾಹನದಲ್ಲಿ ತೆಗೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ವೇಲುವಿನ ಮೃತ ದೇಹದ ಶವ ಪಂಚಾನಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ವೇಲು ರವರ ಬಟ್ಟೆಗಳನ್ನು ವೈಧ್ಯರು ನನ್ನ ವಶಕ್ಕೆ ನೀಡಿದ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ. ನಿಪಿ–22 ರಂತೆ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ–22 ರ ಪಂಚನಾಮೆಯನ್ನು ತನಿಖಾಧಿಕಾರಿಗಳು ಈ ಪ್ರಕರಣಕ್ಕಾಗಿ ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ.

8. ವೈಧ್ಯರಿಂದ ಶವವನ್ನು ನನ್ನ ತಾಬಾಕ್ಕೆ ಪಡೆದ ಬಗ್ಗೆ ರಶೀದಿಗಳು ಇರುವುದಿಲ್ಲ. ಆದರೆ ಅದನ್ನು ಶವ ಪರೀಕ್ಷೆ ವರದಿಯಲ್ಲಿ ನಮೂದಿಸಿರುತ್ತಾರೆ. ಮುದ್ದೆ ಮಾಲು–19 ರಿಂದ 21 ಮೃತ ವೇಲು ರವರ ಶವದಿಂದ ತೆಗೆದ ಬಟ್ಟೆಗಳಲ್ಲ ಎಂದರೆ ಸರಿಯಲ್ಲ. ನಾನು ಸಾಕ್ಷಿದಾರರ ಯಾವುದೇ ಹೇಳಿಕೆ ಮತ್ತು ಮರು ಹೇಳಿಕೆಯನ್ನು ದಾಖಲಿಸಿಲ್ಲ ಎಂದರೆ ಸರಿಯಲ್ಲ. ತನಿಖಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/–

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ